**Code No. 18 X**

### ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ — ಪ್ರೌಢ ದರ್ಜೆ — ಪ್ರಥಮ ಪತ್ರಿಕೆ

## (ವೇಗ)

ಜುಲೈ, 2015

ವೇಳೆ { ಉಕ್ತಲೇಖನ : 10 ನಿಮಿಷಗಳು
ವಿಸ್ತರಣೆ : 2 ಗಂಟೆಗಳು

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಇನ್ನೂರ ಅರವತ್ತು (260) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.

2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳಿಗೆ ಶೀಘ್ರಲಿಪಿ ಟಿಪ್ಪಣಿಯನ್ನು ನಿಗದಿಪಡಿಸಿದ ಅವಧಿಯೊಳಗೆ ಲಿಪ್ಯಾಂತರ ಮಾಡಲು ಸೂಚಿಸತಕ್ಕದ್ದು.

---

ಮಾನ್ಯ ಸಭಾಪತಿಗಳೆ,

ರಾಜ್ಯ ವಿಧಾನ ಮಂಡಲದ ಈ ಜಂಟಿ
ಅಧಿವೇಶನಕ್ಕೆ ನಿಮ್ಮನ್ನು ಹೃತ್ಪೂರ್ವಕವಾಗಿ
ಸ್ವಾಗತಿಸಲು ಹಾಗೂ ನಿಮ್ಮನ್ನು ಉದ್ದೇಶಿಸಿ
$\frac{1}{4}$ ಮಾತನಾಡಲು ನನಗೆ ಸಂತೋಷವಾಗುತ್ತಿದೆ./
ಈ ಸಂದರ್ಭದಲ್ಲಿ ನಾನು ಸನ್ಮಾನ್ಯ ಸದಸ್ಯರಿಗೆ
ಹಾಗೂ ಅವರ ಕುಟುಂಬ ವರ್ಗಕ್ಕೆ ಹೊಸ
ವರ್ಷದ ಶುಭಾಶಯಗಳನ್ನು ಕೋರಬಯಸುತ್ತೇನೆ.

ಕಳೆದ ವರ್ಷ ಈ ಸಭೆಯನ್ನು ಉದ್ದೇಶಿಸಿ
$\frac{1}{2}$ ಮಾತನಾಡಿದ/ ನಂತರ ಉಂಟಾದಂಥ ಕೆಲವು
ಬೆಳವಣಿಗೆಗಳ ಬಗ್ಗೆ ಸಂಕ್ಷಿಪ್ತವಾಗಿ
ಹೇಳಬಯಸುತ್ತೇನೆ. ಕೇಂದ್ರದಲ್ಲಿ ಸಂಯುಕ್ತರಂಗ
ಸರ್ಕಾರವು ಅಸ್ತಿತ್ವಕ್ಕೆ ಬಂದಿರುವುದು
$\frac{3}{4}$ ನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ./
ಕೇಂದ್ರದಲ್ಲಿ ಹೊಸ ಸರ್ಕಾರ ರಚನೆಯಾದ
ಮೇಲೆ ಹೊಸದಾಗಿ ಸಮುದಾಯ ಆರೋಗ್ಯ
ಸೇವೆಗಳು, ಪ್ರಾಥಮಿಕ ಶಿಕ್ಷಣ. ಗ್ರಾಮೀಣ
ರಸ್ತೆಗಳು, ನಮ್ಮ ಬಹುಸಂಖ್ಯಾತ ಜನರ
ಅದರಲ್ಲೂ ಗ್ರಾಮೀಣX ಪ್ರದೇಶಗಳಲ್ಲಿ 1
ವಾಸಿಸುತ್ತಿರುವ ಜನರಿಗಾಗಿ ಗೃಹ ನಿರ್ಮಾಣ
ಹಾಗೂ ಪ್ರಮುಖವಾಗಿ ಸಾಮಾಜಿಕ ಸೇವೆಗಳಿಗೆ
ಇನ್ನೂ ಹೆಚ್ಚಿನ ಗಮನವನ್ನು ಕೊಡಲಾಗುತ್ತಿದೆ.
ಇವುಗಳಿಗೆ ನೀಡಿದ ಪ್ರಾಮುಖ್ಯತೆಗೆ/ ರಾಜ್ಯ $\frac{1}{4}$
ಸರ್ಕಾರದ ಸಂಪೂರ್ಣ ಸಹಮತಿಯೂ ಸಹ
ಇದೆ ಮತ್ತು ಈ ಕ್ಷೇತ್ರಗಳಿಗೆ ಸಾಕಷ್ಟು ಹಣಕಾಸು
ಒದಗಿಸುತ್ತಿದೆ. ಕೇಂದ್ರ ಸರ್ಕಾರವೂ ಸಹ
ಸಾಮಾಜಿಕ–ಆರ್ಥಿಕ ಅಭಿವೃದ್ಧಿಗಾಗಿ ಹೆಚ್ಚು
ಹೆಚ್ಚು/ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ $\frac{1}{2}$

[ Turn over

ತರುವ ಸಲುವಾಗಿ ಈಗ ಇನ್ನಷ್ಟು
ವಿಕೇಂದ್ರೀಕರಿಸುವ ಮತ್ತು ರಾಜ್ಯಗಳಿಗೆ
ಸಂಪನ್ಮೂಲಗಳನ್ನು ಒದಗಿಸುವ ಅವಶ್ಯಕತೆಯ
$\frac{3}{4}$ ಬಗ್ಗೆಯೂ ಹೆಚ್ಚು ತಿಳಿದಿದೆ. ಈ/ ಹಿನ್ನೆಲೆಯಲ್ಲಿ
ಅನೇಕ ಕೇಂದ್ರಾಡಳಿತ ಯೋಜನೆಗಳನ್ನು
ಹಾಗೂ ಕೇಂದ್ರ ವಲಯ ಯೋಜನೆಗಳನ್ನು
ರಾಜ್ಯಗಳಿಗೆ ವರ್ಗಾಯಿಸಿ ಕೊಡುತ್ತಿರುವುದು
ಸಂತೋಷಕರ ವಿಷಯವಾಗಿದೆ.

2 ಕೇಂದ್ರ ಸರ್ಕಾರವುX ಕೈಗಾರಿಕಾ
ಬೆಳವಣಿಗೆಗೆ ನೀಡುವಷ್ಟೇ ಪ್ರಾಮುಖ್ಯತೆಯನ್ನು
ಬಡತನ ನಿವಾರಣಾ ಕಾರ್ಯಕ್ರಮಗಳಿಗೆ ಮತ್ತು
ಸಾಮಾಜಿಕ ಮೂಲಭೂತ ಸೌಲಭ್ಯಗಳ
$\frac{1}{4}$ ಅಭಿವೃದ್ಧಿಗೆ ನೀಡಿದೆ. ಈ ತತ್ವವು ಕೇಂದ್ರ/
ಸರ್ಕಾರದ ಆಯವ್ಯಯದಲ್ಲಿ ಸ್ಪಷ್ಟವಾಗಿ
ರೂಪಿತವಾಗಿದೆ. ಕೃಷಿ, ಗ್ರಾಮೀಣ ಅಭಿವೃದ್ಧಿ,
ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಮುಂತಾದ ಕ್ಷೇತ್ರಗಳಿಗೆ ಹೆಚ್ಚಿನ ಹಣ ಹಂಚಿಕೆ
$\frac{1}{2}$ ಮಾಡಲಾಗಿದೆ. /ಕರ್ನಾಟಕದಲ್ಲೂ ಇದೇ
ರೀತಿಯ ಕಾರ್ಯನೀತಿಯನ್ನು ಅಳವಡಿಸಿ
ಕೊಳ್ಳಲಾಗಿದೆ. ಅಭಿವೃದ್ಧಿ ವೇಗವನ್ನು
ಹೆಚ್ಚಿಸುವುದು, ಜನಜೀವನ, ಮುಖ್ಯವಾಗಿ
$\frac{3}{4}$ ಬಡಜನರ ಜೀವನಮಟ್ಟವನ್ನು ಸುಧಾರಿಸುವಂಥ/
ಕಲ್ಯಾಣ ಕಾರ್ಯಕ್ರಮಗಳನ್ನು ಏಕಕಾಲದಲ್ಲಿ
ಕೈಗೊಳ್ಳುವುದು ಈ ಕಾರ್ಯನೀತಿಯ
ಉದ್ದೇಶವಾಗಿದೆಯೆಂದು ತಿಳಿಸಬಯಸುತ್ತೇನೆ.

ಹಿಂದಿನ ವರ್ಷ ಭರವಸೆ ನೀಡಿದ್ದಂತೆ,
3 ನಾವು ಕೈಗಾರಿಕಾ ನೀತಿಯನ್ನುX ಪ್ರಕಟಿಸಿದ್ದೇವೆ.
ಭಾವಿ ಉದ್ಯಮಿಗಳಿಗೆ ಈ ಯೋಜನೆಯು
ಹಲವಾರು ರೀತಿಯಲ್ಲಿ ಉತ್ತೇಜನವನ್ನು
ನೀಡುತ್ತದೆ. ಬೆಂಗಳೂರು ನಗರ ಜಿಲ್ಲೆಯನ್ನು
ಹೊರತುಪಡಿಸಿ ಇಡೀ ರಾಜ್ಯಕ್ಕೆ ಈ
ಯೋಜನೆ/ ಅನ್ವಯವಾಗುತ್ತದೆಂದು $\frac{1}{4}$
ಘೋಷಿಸಲಾಗಿದೆ. ಇದರಿಂದಾಗಿ ಬೆಂಗಳೂರು
ನಗರದಲ್ಲೇ ಕೈಗಾರಿಕೆಗಳನ್ನು ಸ್ಥಾಪಿಸಬೇಕೆನ್ನುವ
ಒತ್ತಡ ಕಡಿಮೆಯಾಗಿ ಹಿಂದುಳಿದ
ಪ್ರದೇಶಗಳಲ್ಲಿಯೂ ಸಹ ಕೈಗಾರಿಕಾ/ $\frac{1}{2}$
ಅಭಿವೃದ್ಧಿಗೆ ಅವಕಾಶ ದೊರೆಯುತ್ತದೆ ಎಂದು
ತಿಳಿಸಲಿಚ್ಛಿಸುತ್ತೇನೆ.

ರಾಜ್ಯದಲ್ಲಿ ಕಾನೂನು ಮತ್ತು
ಸುವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ
ನಿರ್ವಹಿಸಲಾಗಿದೆ ಎಂಬುದು ಸಮಾಧಾನಕರ/ $\frac{3}{4}$
ಸಂಗತಿಯಾಗಿದೆ. ರಾಜ್ಯದಲ್ಲಿ ಲೋಕಸಭೆಗೆ
ಮತ್ತು ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು
ಶಾಂತಿಯುತವಾಗಿ ನಡೆಸುವುದಕ್ಕಾಗಿ ಸಾಕಷ್ಟು
ವ್ಯವಸ್ಥೆಗಳನ್ನು ಮಾಡಲಾಗಿತ್ತು. ರಾಜ್ಯದ ವಿವಿಧ
ಧರ್ಮX ಮತ್ತು ಭಾಷೆಗಳ ಜನರು 4
ಸೌಹಾರ್ದದಿಂದ ಬಾಳುತ್ತಿರುವ ಒಂದು
ಶಾಂತಿಯುತ ರಾಜ್ಯವೆಂಬ ಹೆಗ್ಗಳಿಕೆಗೆ ಈಗಲೂ
ಪಾತ್ರವಾಗಿದೆ. ಕಾನೂನು ಮತ್ತು ಸುವ್ಯವಸ್ಥೆಯನ್ನು
ಉಲ್ಲಂಘಿಸಿದ ಕೆಲವು/ ಘಟನೆಗಳನ್ನು ದೃಢವಾದ $\frac{1}{4}$
ಮತ್ತು ಸೂಕ್ತವಾದ ಮಧ್ಯ ಪ್ರವೇಶದ ಮೂಲಕ
ನಿವಾರಿಸಲಾಯಿತು ಮತ್ತು ಪರಿಸ್ಥಿತಿಯನ್ನು
ಶೀಘ್ರವಾಗಿ ನಿಯಂತ್ರಣಕ್ಕೆ ತರಲಾಯಿತು.

$\frac{1}{2}$ ರಾಷ್ಟ್ರೀಯ ಮಟ್ಟಗಳಲ್ಲಿ ನಡೆಯುವ/
ಬೆಳವಣಿಗೆಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಕಾಳಜಿ
ಇದೆ. ಸಾಮಾಜಿಕ ನ್ಯಾಯ, ಆರ್ಥಿಕವಾಗಿ ಮತ್ತು
ಸಾಮಾಜಿಕವಾಗಿ ದುರ್ಬಲ ವರ್ಗದವರ
ಕ್ಷೇಮಾಭಿವೃದ್ಧಿಯ ತನ್ನ ಎರಡು ತತ್ವಗಳನ್ನು
$\frac{3}{4}$ ಬಲಿಗೊಡದೆ, /ಇಂಥ ನೀತಿ ಸುಧಾರಣೆಗಳನ್ನು
ಯಾವ ಯಾವ ವಲಯಗಳಲ್ಲಿ ಜಾರಿಗೆ
ತರಬಹುದು ಎಂಬುದನ್ನು ನಾವು
ಪರಿಶೀಲಿಸುತ್ತಿದ್ದೇವೆ. ಸರಕುಗಳನ್ನು ಮತ್ತು
5 ಸೇವೆಗಳನ್ನು ಅವುಗಳ ಆರ್ಥಿಕX ವೆಚ್ಚದಲ್ಲಿ
ಒದಗಿಸುವ ಅಗತ್ಯತೆಯನ್ನು ನಾವು
ಮನಗಂಡಿದ್ದೇವೆ. ಈ ಸೇವೆಗಳು ಸಮಾಜದ
ದುರ್ಬಲ ವರ್ಗಗಳಿಗೆ ಹೊರೆಯಾಗದ
ರೀತಿಯಲ್ಲಿ ನೆಲೆಗೊಳ್ಳುವತೆ ಮಾಡುವ ಒಂದು
$\frac{1}{4}$ ನೀತಿ ಸುಧಾರಣೆಯನ್ನು/ ಜಾರಿಗೆ ತರಲು ನಾವು
ಉದ್ದೇಶಿಸಿದ್ದೇವೆ.

ಜಲವಿದ್ಯುತ್ ಕೇಂದ್ರಗಳ ಜಲಾಶಯಗಳಿಗೆ
ಸಂಬಂಧಪಟ್ಟ ಜಲಾನಯನ ಪ್ರದೇಶಗಳಲ್ಲಿ
ಸಾಕಷ್ಟು ಪ್ರಮಾಣದಲ್ಲಿ ಮಳೆ ಆಗದಿದ್ದ ಕಾರಣ
$\frac{1}{2}$ ಈ/ ಮೂಲಗಳಿಂದ ವಿದ್ಯುತ್ ಉತ್ಪಾದನೆ
ಕಡಿಮೆಯಾಯಿತು. ರಾಜ್ಯ ಸರ್ಕಾರವು ವಿದ್ಯುತ್
ಸಂಪರ್ಕ ಹಾಗೂ ನೀರಾವರಿಯಂಥ
ಮೂಲಭೂತ ಸೌಕರ್ಯದ ವಲಯಗಳ ಮೇಲೆ
$\frac{3}{4}$ ತನ್ನೆಲ್ಲ ಸಾಮರ್ಥ್ಯ ಹಾಗೂ/ ಸಂಪನ್ಮೂಲಗಳನ್ನು
ಕೇಂದ್ರೀಕರಿಸಲು ಪ್ರಯತ್ನಿಸುತ್ತಿರುವ ವಿಷಯ
ಮಾನ್ಯ ಸದಸ್ಯರಿಗೆ ತಿಳಿದೇ ಇದೆ ರಾಜ್ಯ
ಸರ್ಕಾರವು ಮಾನವ ಸಂಪನ್ಮೂಲಗಳ ಅಭಿವೃದ್ಧಿ
ಮೇಲೆ ನೇರ ಪರಿಣಾಮ ಬೀರುವಂತಹX 6
ಯೋಜನೆಗಳನ್ನು ಮತ್ತುಷ್ಟು ಬಲಪಡಿಸಲು
ಯೋಚಿಸುತ್ತದೆ. ಆರ್ಥಿಕವಾಗಿ ಮತ್ತು
ಸಾಮಾಜಿಕವಾಗಿ ಹಿಂದುಳಿದ ವರ್ಗಗಳಿಗೆ
ಶಿಕ್ಷಣ, ಆರೋಗ್ಯ ಮತ್ತು ವಸತಿಗಳಂಥ ಕೆಲವು
ಮೂಲಭೂತ ಸಾಮಾಜಿಕ/ ಸೌಲಭ್ಯಗಳು $\frac{1}{4}$
ಸುಲಭವಾಗಿ ದೊರೆಯುವಂತೆ ನಾವು ಸುಧಾರಣೆ
ಮಾಡಬೇಕಾಗಿದೆ. ರಾಜ್ಯ ಸರ್ಕಾರವು
ಮಹಿಳೆಯರಿಗೆ ಅಧಿಕಾರ ನೀಡುವ ವಿಷಯದಲ್ಲಿ
ಮತ್ತು ಯುವಜನರ ಅಭಿವೃದ್ಧಿಯಲ್ಲಿ/ ನಂಬಿಕೆ $\frac{1}{2}$
ತಳೆದಿದೆ. ಗ್ರಾಮೀಣ ಮತ್ತು ನಗರ ಸ್ಥಳೀಯ
ಸಂಸ್ಥೆಗಳ ವ್ಯಾಪಕ ಅಭಿವೃದ್ಧಿಗಾಗಿ ಪಂಚಾಯತ್
ರಾಜ್ ಸಂಸ್ಥೆಗಳನ್ನು ಮತ್ತು ನಗರ ಸ್ಥಳೀಯ
ಸಂಸ್ಥೆಗಳನ್ನು ಹಾಗೂ ಉದ್ಯೋಗ ರಹಿತರಿಗೆ/ $\frac{3}{4}$
ಉದ್ಯೋಗವನ್ನು ಸೃಜಿಸುವುದಕ್ಕೆ ಸರ್ಕಾರವು
ಗಮನಹರಿಸಿದೆ.

ಇಷ್ಟು ಹೊತ್ತು ಮಾತನಾಡಲು ಅವಕಾಶ
ಕೊಟ್ಟ ಎಲ್ಲ ಹಿರಿಯರಿಗೆ ವಂದಿಸುತ್ತಾ ನನ್ನ
ಭಾಷಣವನ್ನು ಮುಗಿಸುತ್ತೇನೆ. ಜೈ ಕರ್ನಾಟಕ.X 7

ಮಾನ್ಯ ಸಂಪಾದಕರಿಗೆ, ವಿಜಯವಾಣಿ,
ಬೆಂಗಳೂರು.

ಮಹಾಶಯರೇ,

ಬೃಹತ್ ಬೆಂಗಳೂರು ಮಹಾನಗರ
ಪಾಲಿಕೆಯಲ್ಲಿನ ಸೊಳ್ಳೆ ಹಾವಳಿಯನ್ನು ಈ
ಮೂಲಕ ಸಂಬಂಧಪಟ್ಟವರ ಗಮನಕ್ಕೆ/ $\frac{1}{4}$
ತರಲಿಚ್ಛಿಸುತ್ತೇನೆ. ಇತ್ತೀಚೆಗೆ ಬೆಳೆದಿರುವ

ಸೊಳ್ಳೆಗಳ ಕಾಟವನ್ನು ನೋಡಿದರೆ ಮಹಾನಗರ
ಪಾಲಿಕೆ ನಿದ್ರೆ ಮಾಡುತ್ತಿದೆಯೋ ಹೇಗೆ ಎಂಬ
ಸಂಶಯ ಬರುತ್ತದೆ. ಬೇಸಿಗೆ ಬರುತ್ತಲೇ
$\frac{1}{2}$ ಸೊಳ್ಳೆಗಳ ಸಂಖ್ಯೆ/ ಹೆಚ್ಚಾಗಿ ನಾಗರೀಕರು
ಅನುಭವಿಸುವ ಬವಣೆ ಎಲ್ಲರಿಗೂ ತಿಳಿದಿದೆ.
ಇದಕ್ಕೆ ಸಂಬಂಧಪಟ್ಟ ವಿಭಾಗದ ಅಧಿಕಾರಿಗಳ
ಅಧಕ್ಷತೆಯೇ ಕಾರಣ ಎಂದು ಹೇಳಬೇಕಾಗಿದೆ.
$\frac{3}{4}$ ಈ ಬಗ್ಗೆ ವಿಚಾರ/ ಮಾಡಿದಾಗ ರಸ್ತೆಯ
ಪಕ್ಕದಲ್ಲಿರುವ ಚರಂಡಿಗಳಲ್ಲಿ ನೀರು ನಿಂತು
ಸೊಳ್ಳೆಗಳ ಉತ್ಪನ್ನಕ್ಕೆ ಕಾರಣವಾಗಿದೆ ಎಂದು
ಹೇಳುತ್ತಾರೆ. ಅದಕ್ಕೋಸ್ಕರ ಸೊಳ್ಳೆ ಹತೋಟಿ
8 ವಿಭಾಗವನ್ನು ಸೃಷ್ಟಿ ಮಾಡಲಾಗಿರುತ್ತದೆ.X ಈ
ವಿಭಾಗದಲ್ಲಿ ಇರುವ ನಾನಾ ದರ್ಜೆಯ
ಅಧಿಕಾರಿಗಳು ಅವರ ಕೈಕೆಳಗಿರುವ ನೂರಾರು
ಜನ ನೌಕರರು ಏನು ಮಾಡುತ್ತಿದ್ದಾರೆ.
ಇವರೆಲ್ಲರೂ ನಿಷ್ಪಕ್ಷಪಾತವಾಗಿ ಶೇಕಡಾ
$\frac{1}{4}$ ಮೂವತ್ತರಷ್ಟು/ ತಮ್ಮ ಕೆಲಸ ನಿರ್ವಹಿಸಿದರೆ
ಸಾಕು, ಬೆಂಗಳೂರಿನ ಸೊಳ್ಳೆಯನ್ನು ಹತೋಟಿಗೆ
ತರಬಹುದು. ಹಿಂದಿನ ಆಡಳಿತಗಾರರ
ಅವಧಿಯಲ್ಲಿ ಇವರುಗಳು ಕೆಲಸ ಮಾಡುತ್ತಾ
$\frac{1}{2}$ ಇರಲಿಲ್ಲವೇ ಎಂಬ/ ಪ್ರಶ್ನೆ ಏಳುತ್ತದೆ. ಹಿಂದಿನ
ಕಾಲದಲ್ಲಿಯೂ ಸಹ ಚರಂಡಿಗಳಲ್ಲಿ ನೀರು
ತುಂಬಿರುತ್ತಿತ್ತು. ಆದರೆ, ಅಂದಿನ ಪಾಲಿಕೆಯ
ಅಧಿಕಾರಿಗಳು ಅದಕ್ಕಾಗಿ ಸೂಕ್ತ ಮುನ್ನೆಚ್ಚರಿಕಾ
$\frac{3}{4}$ ಕ್ರಮಗಳನ್ನು ಕೈಗೊಳ್ಳುತ್ತಿದ್ದರು. /ಆದರೆ, ಈಗಿನ
ಅಧಿಕಾರಿಗಳು ಕೇವಲ ಅವರ ಹಕ್ಕುಗಳಿಗಾಗಿ
ಹೋರಾಡುತ್ತಾರೆಯೇ ಹೊರತು ತಮ್ಮ
ಜವಾಬ್ದಾರಿಗಳತ್ತ ಗಮನಹರಿಸುವುದಿಲ್ಲ.

ಬೆಂಗಳೂರು ಮಹಾನಗರದX ಸೊಳ್ಳೆಗಳ 9
ಹಾವಳಿಯು ಹೀಗೇ ಮುಂದುವರಿದರೆ
ಮಲೇರಿಯ ಮುಂತಾದ ಹಲವಾರು
ಖಾಯಿಲೆಗಳಿಗೆ ಜನ ತುತ್ತಾಗುವುದು ಖಂಡಿತ.
ಈ ಬಗ್ಗೆ ಪಾಲಿಕೆಯ ಸಂಬಂಧಪಟ್ಟ
ಅಧಿಕಾರಿಗಳು ನಗರದ/ ನಾಗರಿಕರ ಮೇಲೆ $\frac{1}{4}$
ದಯೆ ತೋರಿ ತಾವು ಪಡೆಯುವ ಸಂಬಳದ
ಋಣಕ್ಕಾಗಿಯಾದರೂ ತಮ್ಮ ಕೆಲಸವನ್ನು
ನಿರ್ವಹಿಸಿ ಈ ಸೊಳ್ಳೆ ಮಾರಿಯನ್ನು
ನಿಯಂತ್ರಿಸುವಲ್ಲಿ ಶಕ್ತಿಮೀರಿ ಪ್ರಯತ್ನಿಸಬೇಕು.
ಸಾರ್ವಜನಿಕೂ/ ಸಹ ತಮ್ಮ ಮನೆಯ $\frac{1}{2}$
ಸುತ್ತಮುತ್ತಲಿನ ಬಚ್ಚಲು ನೀರನ್ನು ಮಳೆ ನೀರಿನ
ಚರಂಡಿಗೆ ಬಿಡದೆ, ಒಳಚರಂಡಿ ವ್ಯವಸ್ಥೆ
ಮಾಡಿಕೊಂಡು ನಗರ ಸಭೆಯೊಂದಿಗೆ
ಸಹಕರಿಸಿದರೆ ಸೊಳ್ಳೆ ಮಾರಿಯನ್ನು/ $\frac{3}{4}$
ನಿಯಂತ್ರಿಸಬಹುದು.

ಉದ್ಯಾನನಗರಿ ಖ್ಯಾತಿಯ ಬೆಂಗಳೂರು
ನಗರದ ಘನತೆಯನ್ನು ಕಾಪಾಡುವಲ್ಲಿ
ಪಾಲಿಕೆಯ ಅಧಿಕಾರಿಗಳು ಶ್ರಮಿಸುತ್ತಾರೆಂದು
ನಂಬಿರುತ್ತೇನೆ.

ಜಯಪ್ರಕಾಶ್, ರಾಜಾಜಿನಗರX 10